ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 08-08-2022

ಬೀದರ ಸಂಚಾರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 81/2022 ಕಲಂ 279, 304 (ಎ) ಐಪಿಸಿ :-

ದಿನಾಂಕ: 07-08-2022 ರಂದು ಫಿರ್ಯಾದಿ ಶ್ರೀವರಾಜ ತಂದೆ ರಘುನಾಥ ವಯ: 67 ವರ್ಷ ರವರ ಅಳಿಯ ಮನೋಜಕುಮಾರ ತಂದೆ ಮಧುಕರರಾವ ರವರು ಮೋಟಾರ ಸೈಕಲ ನಂ ಕೆಎ38ವಾಯ್ 5462 ನೇದ್ದರ ಮೇಲೆ ನೌಬಾದ ಕಡೆಯಿಂದ ಶಿವನಗರ ಕಡೆಗೆ ಅತೀ ವೇಗ ಹಾಗು ನಿಸ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು, ಮದ್ಯಾನ 12:35 ಗಂಟೆ ಸುಮಾರಿಗೆ ಎರಫೋರ್ಸ ಪವರ್ ಹೌಸ ಹತ್ತಿರ ವೇಗ ಹತೋಟಿಯಲ್ಲಿಟ್ಟುಕೊಳ್ಳದೇ ಸ್ಕೀಡ್ ಆಗಿ ಬಿದ್ದಿದ್ದರಿಂದ ಗಾಯಗಳಾಗಿ ಮನೋಜಕುಮಾರ ವಯ: 42 ವರ್ಷ ರವರು ಮೃತಪಟ್ಟಿರುತ್ತಾರೆ. ಮೋಟಾರ ಸೈಕಲ ನಂ ಕೆಎ38ವಾಯ್ 5462 ಇರುತ್ತದೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಗಾಂಧಿಗಂಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 120/2022 ಕಲಂ 87 ಕೆಪಿ ಕಾಯ್ದೆ :-

ದಿನಾಂಕ 07/08/2022 ರಂದು 1100 ಗಂಟೆಗೆ ಪಿಎಸ್ಐ ರವರು ಗಾಂಧಿಗಂಜ ಪೊಲೀಸ್ ಠಾಣೆಯಲ್ಲಿದ್ದಾಗ ಗಾಂಧಿಗಂಜ ಠಾಣಾ ವ್ಯಾಪ್ತಿಯ ವಿವೇಕಾನಂದ ಕಾಲೋನಿಯಲ್ಲಿ ಸಾರ್ವಜನಿಕ ಖುಲ್ಲಾ ಸ್ಥಳದಲ್ಲಿ ಸುಮಾರು 6-7 ಜನ ಕೂಡಿಕೊಂಡು ಹಣ ಹಚ್ಚಿ ಪಣ ತೊಟ್ಟು ಅಂದರ್ ಬಾಹರ್ ನಸೀಬಿನ ಜೂಜಾಟ(ಇಸ್ಪೀಟ್) ಆಡುತ್ತಿದ್ದಾರೆ ಅಂತ ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ಮರೆಯಾಗಿ ನಿಂತು ನೋಡಲಾಗಿ ಸಾರ್ವಜನಿಕ ಖುಲ್ಲಾ ಸ್ಥಳದಲ್ಲಿ 07 ಜನರು ಗುಂಪಾಗಿ ನೆಲದ ಮೇಲೆ ಕುಳಿತು ಇಸ್ಪೀಟ್ ಎಲೆಗಳಿಂದ ಹಣ ಹಚ್ಚಿ ಪಣತೊಟ್ಟು ಅಂದರ ಬಾಹರ ಎನ್ನುವ ನಸಿಬಿನ್ ಜೂಜಾಟ ಆಡುತ್ತಿದ್ದುದ್ದನ್ನು ನೋಡಿ ಖಚಿತ ಪಡಿಸಿಕೊಂಡು 1200 ಗಂಟೆಗೆ ನಾವು ಪಂಚರ ಸಮಕ್ಷಮ ಜೂಜಾಟದಲ್ಲಿ ತೊಡಗಿದವರ ಮೇಲೆ ಒಮ್ಮೆ¯ ದಾಳಿ ಮಾಡಿ ಜೂಜಾಟ ಆಡುತ್ತಿದ್ದ ಎಲ್ಲಾ 07 ಜನರಿಗೆ ಹಿಡಿದುಕೊಂಡು ಅವರ ವಶದಿಂದ ಿದ ಒಟ್ಟು ರೂ. 17500/- ನಗದು ಹಣ ಹಾಗೂ 52 ಇಸ್ಪೇಟ ಎಲೆಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಬೀದರ ನೂತನ ನಗರ ಠಾಣೆ. ಅಪರಾಧ ಸಂಖ್ಯೆ 136/2022 ಕಲಂ 376 ಐಪಿಸಿ :-

ದಿನಾಂಕ 07/08/2022 ರಂದು 1915 ಗಂಟೆಗೆ ಫಿರ್ಯಾದಿ ಶ್ರೀ. ಸಂಜೀವಕುಮಾರ ತಂದೆ ನರಸಿಂಗರಾವ ವಯ:47 ವರ್ಷ ಜಾತಿ:ಮೇದಾ(ಬುರುಡ) ಸಾ:ಸಾಯಿ ಕಾಲೋನಿ ಬೀದರ ನಿವಾಸಿ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೇನೆಂದರೆ. ಇವರು ಭಾರತೀಯ ಪುರಾತತ್ವ ಇಲಾಖೆ ಬೀದರನಲ್ಲಿ ಮಲ್ಟಿ ಟಾಸ್ಕಿಂಗ ಸ್ಟಾಫ ಕೆಲಸ ಮಾಡಿಕೊಂಡು ಉಪಜೀವಿಸಿಕೊಂಡಿರುತ್ತಾರೆ, ಇವರ ಇಲಾಖೆಯ ವ್ಯಾಪ್ತಿಯಲ್ಲಿ ಬರೀದ ಷಾಹಿ ಟೋಂಬ್ಸಗಳ ಸ್ಮಾರಕವಾದ ಬರೀದ ಶಾಹಿ ಟೋಂಬ(ಸಬ್ಬಲ ಬರೀದ ಗೋರಿ) ಸ್ಮಾರಕ ಇರುತ್ತದೆ. ದಿನಾಲು 9:00 ಎ,ಎಮ ಗಂಟೆಯಿಂದ 6:00 ಪಿ,ಎಮ ಗಂಟೆಯವರೆಗೆ ಬರೀದ ಶಾಹಿ ಟೋಂಬ್ಸಗಳ ಸ್ಮಾರಕವಾದ ಇಬ್ರಾಹಿಂ ಬರೀದ ಶಾಹಿ ಟೋಂಬ(ಸಬ್ಬಲ ಬರೀದ ಗೋರಿ) ಸ್ಮಾರಕಗಳನ್ನು ನೋಡಿಕೊಂಡು ಸುತುಮುತ್ತಲು ರೌಂಡಿಗ ಮಾಡುತೀರುತ್ತಾರೆ ದಿನಾಂಕ 06/08/2022 ರಂದು ಸಾಯಂಕಾಲ 1800 ಗಂಟೆಯ ವರೆಗೆ ರೌಂಡ್ಸ ಮಾಡಿ ಮನೆಗೆ ಹೋಗಿರುತ್ತಾರೆ ದಿನಾಂಕ 07/08/2022 ರಂದು ಮುಂಜಾನೆ 9:00 ಎ.ಎಮ್ ಗಂಟೆಗೆ ಕರ್ತವ್ಯಕ್ಕೆ ಬಂದು ನೋಡಿದಾಗ ಬರೀದ ಶಾಹಿ ಟೋಂಬ್ಸಗಳ (ಸಬ್ಬಲ ಬರೀದ ಗೋರಿ) ಸ್ಮಾರಕ ಸುತ್ತಲು ಇರುವ ಬೌಂಡರಿ ಗೋಡೆ ಮೇಲೆ ಇರುವ ಸುಮಾರು 10 ಗ್ರೀಲ(ಜಾಲಿ)ಗಳು ಅ,ಕಿ 30,000/-ರೂ ಇದ್ದಿರುವುದಿಲ್ಲ. ಅಲ್ಲಿನ ಜಾಲಿಗಳು ರಾತ್ರಿ ವೇಳೆಯಲ್ಲಿ ಯಾರೋ ಕಳ್ಳರು ಕಳವು ಮಾಡಿಕೊಂಡು ಹೋಗಿದ್ದು ಇರುತ್ತದೆ. ಕಾರಣ ದಿನಾಂಕ 06/08/2022 ರಂದು ಸಾಯಂಕಾಲ 1800 ಗಂಟೆಯಿಂದ ದಿನಾಂಕ 07/08/2022 ರಂದು 0900 ಗಂಟೆಯ ಅವಧಿಯಲ್ಲಿ ಗುಂಬಜಗಳ ಸುತ್ತಲು ಇದ್ದ ಬೌಂಡರಿ ಗೋಡೆಗಳ ಮೇಲಿದ್ದ ಗ್ರೀಲ(ಜಾಲಿ)ಯನ್ನು ಕಳವು ಮಾಡಿಕೊಂಡು ಹೋಗಿರುತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.